**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ,**

**ದೊಡ್ಡಬಳ್ಳಾಪುರ**

**ಸಿ ಸಿ ನಂ : 418/2016**

**ಪಿ ಡಬ್ಲ್ಯೂ - 2**

**ಸಿ ಡಬ್ಲ್ಯೂ - 2**

**ದಿಃ 17.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಹೆಸರು ಃ ಶ್ರೀನಿವಾಸ್**

**ತಂದೆಯ ಹೆಸರು ಃ ವೆಂಕಟಶ್ಯಾಮಪ್ಪ**

**ವಯಸ್ಸು ಃ 65 ವರ್ಷ**

**ಉದ್ಯೋಗ ಃ ವ್ಯವಸಾಯ**

**ವಿಳಾಸ ಃ ದೊಡ್ಡಬಳ್ಳಾಪುರ**

**<u>ಮುಖ್ಯ ವಿಚಾರಣೆ</u> ಃ ಸ ಸ ಅ ರವರಿಂದ**

ಆರೋಪಿತರು ನಮ್ಮ ಸಂಬಂಧಿಕರು. ಚಾಸಾ-1 ರವರು ನನ್ನ ಸಹೋದರ. ಆರೋಪಿತರು ನನ್ನ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿಲ್ಲ. ಆರೋಪಿತರು ಅವಾಚ್ಯಶಬ್ಧಗಳಿಂದ ಬೈದಿಲ್ಲ ಹಾಗೂ ಕೈಗಳಿಂದ ಹೊಡೆದು ತಳ್ಳಾಡಿಲ್ಲ.

**(ಈ ಹಂತದಲ್ಲಿ ಸ ಸ ಅ ರವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಅನುಮತಿ ನೀಡಲಾಯಿತು)**

**<u>ಪಾಟೀ ಸವಾಲುಃ</u> ಸ ಸ ಅ ರವರಿಂದ**

ದಿಃ 05.10.2014 ರಂದು ಮಧ್ಯಾಹ್ನ 12-00 ಗಂಟೆ ಸಮಯದಲ್ಲಿ ನಾನು ಮತ್ತು ಚಾಸಾ-1 ರವರು ಗುಮ್ಮನಹಳ್ಳಿ ಗ್ರಾಮದ ಸರ್ವೇ ನಂ. 7/1 ಬಿಗೆ ಸೇರಿದ 18 ಗುಂಟೆ ಜಮೀನಿನಲ್ಲಿ ನಾನು ಮತ್ತು ಚಾಸಾ-1 ರವರು ಟ್ರ್ಯಾಕ್ಟರ್ ನಲ್ಲಿ ಉಳುಮೆ ಮಾಡಿಸುತ್ತಿದ್ದಾಗ 1 ರಿಂದ 4 ನೇ ಆರೋಪಿತರು ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿದ್ದರು ಎಂದರೆ ಸರಿಯಲ್ಲ. ಅದೇ ಸಮಯದಲ್ಲಿ ಆರೋಪಿತರು ಜಮೀನು ತಮಗೆ ಸೇರಿದ್ದು ಎಂದು, ಉಳುಮೆ ಮಾಡಿಸುತ್ತಿರುವವನು ಯಾವನೋ ಎಂದು ಅವಾಚ್ಯಶಬ್ಧಗಳಿಂದ ಬೈದು ನನಗೂ ಹಾಗೂ ಚಾಸಾ-1 ರವರಿಗೂ ಕೈಗಳಿಂದ ಹೊಡೆದು ತಳ್ಳಾಡಿದ್ದರು ಎಂದರೆ ಸರಿಯಲ್ಲ. ಈ ಕುರಿತು ಚಾಸಾ-1 ರವರು ಪೋಲೀಸರಿಗೆ ದೂರು ನೀಡಿದ್ದರು ಎಂದರೆ ಸರಿಯಲ್ಲ. ಈ ಕುರಿತು ದಿಃ

07.10.2014 ರಂದು ಈಗ ಮೇಲೆ ಹೇಳಿದಂತೆ ನನ್ನ ಹೇಳಿಕೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆ ಭಾಗವನ್ನು ನಿಪಿ-3 ಎಂದು ಗುರುತಿಸಲಾಯಿತು. ನಿಪಿ-3 ರಲ್ಲಿನ ವಿಚಾರ ಗೊತ್ತಿದ್ದರು ನಾನು ಸುಳ್ಳು ನುಡಿಯುತ್ತಿದ್ದೇನೆಂದರೆ ಸಾಕ್ಷಿಯು ನಾವು ಈಗ ರಾಜಿಯಾಗಿದ್ದೇವೆಂದು ನುಡಿಯುತ್ತಾರೆ. ರಾಜಿಯಾದ ಕಾರಣ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ನುಡಿಯುತ್ತಿದ್ದೇನೆಂದರೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಇಲ್ಲ ಎಂದು ನುಡಿದಿರುತ್ತಾರೆ.**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಕಂಪ್ಯೂಟರನಲ್ಲಿ ಮಾಡಿಸಲಾಯಿತು)**

**ಓ ಹೇ ಕೇ ಸ ಅದೆ**

**ಅಪರ ಸಿವಿಲ್ ನ್ಯಾ. ಮತ್ತು**
**ಜೆ.ಎಂ.ಎಫ್.ಸಿ, ದೊಡ್ಡಬಳ್ಳಾಪುರ**